# ನಾಟ್ಯರಂಗದಿಂದ ನಟನೆಯೆಡೆಗೆ...

## ದುರ್ಗಶ್ರೀ

ಉದಯದ 'ನೇತ್ರಾವತಿ'ಯ ನಾಯಕಿ



◆ **ನಟಿ ಆಗಿದ್ದು ಹೇಗೆ?**

ನಾನು ನಟಿ ಆಗಬೇಕು ಎನ್ನುವುದು ನಮ್ಮ ಅಮ್ಮನ ಬಯಕೆಯಾಗಿತ್ತು. ಮೂಲತಃ ನಾನು ಭರತನಾಟ್ಯ ಕಲಾವಿದೆ. ನೃತ್ಯವನ್ನೇ ವೃತ್ತಿಪರವಾಗಿ ತೆಗೆದುಕೊಳ್ಳಬೇಕು ಎನ್ನುವ ಯೋಚನೆ ಇತ್ತು. ನನ್ನ ತಾಯಿ ಹುರಿದುಂಬಿಸಿ ಬೆನ್ನು ತಟ್ಟಿದ್ದರಿಂದ ನಾನಿಂದು ಕಿರುತೆರೆಯಲ್ಲಿ ಕಾಣುತ್ತಿದ್ದೇನೆ. ಇದು ನನ್ನ ಮೊದಲ ಧಾರಾವಾಹಿ. 'ನೇತ್ರಾವತಿ'ಯ ಮೂಲಕ ದುರ್ಗಶ್ರೀ ಕೂಡ ಮನೆ ಮನೆಗೆ ಹರಿದು ಹೋಗುವಂತೆ ಆಗಿದೆ. ಇದಕ್ಕೂ ಮೊದಲು ಕ್ಯಾಮೆರಾ ಎದುರಿಸುವುದು ಹೇಗೆ ಎನ್ನುವ ಪ್ರಾಥಮಿಕ ಅರಿವೂ ಇರಲಿಲ್ಲ. ಬಣ್ಣ ಹಚ್ಚಿದ ನಂತರವೇ ನಾನು ಅಭಿನಯ ಜಗತ್ತಿನ ಬೇರೆ ಬೇರೆ ತಿಳಿವಳಿಕೆಯನ್ನು ಕಲಿಯುತ್ತಿದ್ದೇನೆ, ನಟನೆಯನ್ನೂ ಕೂಡ ಮೊದಲ ಪಾತ್ರದ ನಿರ್ವಹಣೆಯ ಮೂಲಕವೇ ಕಲಿಯುತ್ತಿದ್ದೇನೆ.

◆ **ಮೊದಲ ದಿನದ ಚಿತ್ರೀಕರಣದ ಸಂದರ್ಭ ಹೇಗಿತ್ತು?**

ಚಿತ್ರೀಕರಣದಲ್ಲಿ ನನ್ನ ಖುಷಿಗಿಂತಲೂ ಅಮ್ಮನ ಮುಖದಲ್ಲಿ ವ್ಯಕ್ತವಾದ ಸಂತೋಷ ನನಗೆ ತೃಪ್ತಿಯನ್ನು ಕೊಟ್ಟಿತು ಎಂದು ಆ ಕ್ಷಣ ಅನ್ನಿಸಿತು. ನಿರ್ದೇಶಕರು ಪ್ರತಿ ಹಂತದಲ್ಲಿಯೂ ಕೂಡ ತಿಳಿಹೇಳಿ ನನ್ನಿಂದ ಅಭಿನಯವನ್ನು ಹೊರಹೊಮ್ಮಿಸಿದರು. ಅದೆಲ್ಲವೂ ನನ್ನಲ್ಲಿ ಉತ್ಸಾಹವನ್ನು ತುಂಬಿದ್ದರಿಂದ ನಟಿಸಲು ಸಾಧ್ಯವಾಯಿತು. ಮೊದಲ ದಿನ ಎಲ್ಲದೂ ಹೊಸತು. ನನ್ನ ಕಣ್ಣಿಗೆ ಕಂಡಿದ್ದೆಲ್ಲ ಬೆರಗನ್ನು ಹುಟ್ಟಿಸುತ್ತಿತ್ತು. ಹಾಗಾಗಿ ತುಂಬ ಗೊಂದಲ ನನ್ನನ್ನು ಆವರಿಸಿತ್ತು. ನಂತರ ನಿರ್ದೇಶಕರೇ ಪೂರ್ವಪ್ರಾಥಮಿಕ ಮಕ್ಕಳಿಗೆ ವರ್ಣಮಾಲೆ ಕಲಿಸಿದಂತೆ ನಟನೆಯ ಮೂಲಪಾಠದ ಓಂಕಾರವನ್ನು ಕಲಿಸಿದರು. ಶೂಟಿಂಗ್ ಮನೆ ಎನ್ನುವುದು ನಾನು ಆಡಿ ಬೆಳೆದ ಮನೆಯಂತೆ ಅನ್ನಿಸಿತು. ನಮ್ಮ ಮನೆಯ ಹಿರಿಯರೆ ಏನೋ ಹೇಳಿಕೊಡುತ್ತಿದ್ದಾರೆ ಎಂದು ಮೊದಲ ದಿನವೇ ಅನಿಸಿತು.

◆ **ನೇತ್ರಾವತಿಯ ಪಾತ್ರ ನಿಮಗೆ ಹೇಗೆನಿಸುತ್ತಿದೆ?**

ಪಾತ್ರದಲ್ಲಿ ನಾನು ಧರ್ಮಸ್ಥಳದ ಶ್ರೀಮಂಜುನಾಥ ಸ್ವಾಮಿಯ ಪರಮ ಭಕ್ತೆ. ನಮ್ಮ ಮನೆ ದೇವರೂ ಅದೇ ಆಗಿರುವುದರಿಂದ ವೈಯಕ್ತಿಕವಾಗಿಯೂ ಮಂಜುನಾಥನನ್ನು ಆರಾಧಿಸುತ್ತೇನೆ. ಈ ದೃಷ್ಟಿಯಿಂದ ನೋಡಿದರೆ ಪಾತ್ರ ಖಾಸಗೀಯಾಗಿಯೂ ನನಗೆ ಹೆಚ್ಚು ಅನ್ವಯವಾಗುವಂತೆ ಇದೆ. ಇದರಲ್ಲಿ ನಾನು ಆಶಾ ಕಾರ್ಯಕರ್ತೆ. ಸಮುದಾಯಕ್ಕೆ ಒಳ್ಳೆಯದನ್ನು ಬಯಸುವ ಮನಸ್ಸು ನನ್ನದು. ಸಮಾಜ ಮತ್ತು ಕುಟುಂಬ ಎಲ್ಲೇ ಆದರೂ ಮತ್ತೊಬ್ಬರ ನೋವಿಗೆ ಸ್ಪಂದಿಸುವ ಜೊತೆಗೆ ತುಂಬ ಖುಷಿಯಿಂದ ಇರುವ ಪಾತ್ರ. ನನ್ನ ಕಷ್ಟವನ್ನು ಲೆಕ್ಕಿಸದೆ ಮತ್ತೊಬ್ಬರಿಗೆ ಮಾಡುವ ಸಹಾಯದಲ್ಲಿ ಸಾರ್ಥಕತೆಯನ್ನು ಕಾಣುವ ಪಾತ್ರ. ಆದರ್ಶ ವ್ಯಕ್ತಿತ್ವದ ಪಾತ್ರ ವೈಯಕ್ತಿಕವಾಗಿ ನನಗೂ ಇಷ್ಟವಾಗುವಂತಿದೆ.

◆ **ನಟನೆಗೆ ಅವಕಾಶ ಸಿಕ್ಕಿದ್ದು ಹೇಗೆ?**

ಬೆಂಗಳೂರಿನ ಹೆಸರಘಟ್ಟದ ಕಾಲೇಜೊಂದರಲ್ಲಿ ಮೊದಲ ವರ್ಷದ ಬಿಕಾಂ ಓದುತ್ತಿದ್ದೇನೆ. ನಾನು ಒಂಬತ್ತು ವರ್ಷದವಳು ಇದ್ದಾಗಿನಿಂದ ಶಾಸ್ತ್ರೀಯ ನೃತ್ಯವನ್ನು ಅಭ್ಯಾಸ ಮಾಡುತ್ತಿದ್ದೇನೆ. ಡಾನ್ಸ್ ಅಂದರೆ ನನಗೆ ಸಿಕ್ಕಾಪಟ್ಟೆ ಕ್ರೇಜ್ ಕೂಡ. ಮನೆಯಲ್ಲಿ ನಟನೆಯತ್ತ ಗಮನಕೊಡು ಎಂದು ಪ್ರೋತ್ಸಾಹದ ಮಾತಿನಿಂದ ಪ್ರೇರಣೆ ಪಡೆದೆ. ನಂತರ ಆಡಿಷನ್ ಕೊಡ್ತಾ ಇದ್ದೆ. ಸುಮಾರು ಒಂದು ವರ್ಷದಿಂದ ಆಡಿಷನ್ ನೀಡಿದ್ದೇನೆ. ಹಲವಾರು ಆಡಿಷನ್ ನೀಡಿದ್ದರೂ 'ನೇತ್ರಾವತಿ'ಗೆ ಆಡಿಷನ್ ಕೊಟ್ಟಾಗ ತುಂಬ ಭಯಗೊಂಡಿದ್ದೆ. ಡೈಲಾಗ್ ಶೀಟ್ ನೋಡಿದ ಮೇಲೆ ಸಮಾಧಾನವಾಯಿತು. ನನಗೆ ಸಾಧ್ಯವಾದಮಟ್ಟಿಗೆ ಚೆನ್ನಾಗಿ ಮಾಡಿದೆ ಆದರೂ ಮೇಕಪ್ ಮಾಡಿಸಿ ಮತ್ತೊಮ್ಮೆ ಟೆಸ್ಟ್ ಮಾಡಿಸಿದರು. ಕೆಲ ದಿನಗಳ ನಂತರ ಆಯ್ಕೆ ಆಗಿರುವುದಾಗಿ ಸಂದೇಶವನ್ನು ನೀಡಿದರು.

◆ **ಮುಂದೆ ಏನು ಮಾಡಬೇಕು ಎಂದು ಅನ್ನಿಸುತ್ತದೆ?**

ನನ್ನ ಮೊದಲ ಗುರಿಯೇ ಒಳ್ಳೆಯ ನೃತ್ಯಾಪಟು ಆಗಬೇಕು ಎನ್ನುವುದು. ಶೈಕ್ಷಣಿಕವಾಗಿ ಮತ್ತು ಅಭಿನಯದ ನೆಲೆಯಲ್ಲಿ ಯಾವುದೇ ಸ್ಥಾನ ಸಿಕ್ಕರೂ ನನ್ನ ಮೊದಲ ಆಯ್ಕೆ ನೃತ್ಯ. ಇದರಲ್ಲಿ ನನಗೆ ಯಾವುದೇ ಅನುಮಾನಗಳು ಇಲ್ಲ. ಒಳ್ಳೆಯ ಡಾನ್ಸರ್ ಆಗಿ, ಬೇರೆ ಬೇರೆ ಪ್ರಕಾರಗಳನ್ನೂ ಕಲಿಯಬೇಕು. ಭರತನಾಟ್ಯದ ಜೊತೆ ಕಥಕ್, ಮೋಹಿನಿಅಟ್ಟಂ ಕೂಡ ಕಲಿಯಬೇಕು. ನಟಿಯಾಗಿ ಒಳ್ಳೆಯ ಸ್ಥಾನಕ್ಕೆ ತಲುಪಬೇಕು. ಇದೆಲ್ಲ ಹವ್ಯಾಸವಾಗಿ ಇಟ್ಟುಕೊಂಡು ವೃತ್ತಿಯಾಗಿ ಯಾವುದಾದರೂ ಉದ್ಯೋಗವನ್ನೇ ಮಾಡಬೇಕು ಎಂದು ನನಗೆ ಅನ್ನಿಸುತ್ತದೆ. ಕಲೆಯಲ್ಲಿ ಎಂತಹ ದೊಡ್ಡ ಅವಕಾಶ ಸಿಕ್ಕರೂ ಬಾಲ್ಯದ ಆಸೆ ನೌಕರಿ ಮಾಡುವುದು. ಸದ್ಯ ನಟನೆಯನ್ನು ಮುಂದುವರಿಸುತ್ತೇನೆ. ಸೌಮ್ಯ ಸ್ವಭಾವದ ಪಾತ್ರಗಳೇ ನನಗೆ ಇಷ್ಟ. ಖಳನಾಯಕಿಯಾಗಿ ಕಾಣಿಸಿಕೊಳ್ಳಲು ಇಷ್ಟ ಇಲ್ಲ.

■ **ರಾಘವೇಂದ್ರ ಕೆ.**